# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ

## ಸಿ.ಸಿ.ನಂ.558/2023

ಪಿರ್ಯಾದಿದಾರರುಃ  ಜಾಲಹಳ್ಳಿ ಪೋಲಿಸ ಠಾಣೆ

**ವಿರುದ್ಧ**

ಆರೋಪಿತರುಃ

1. ಶರಣಬಸವ ತಂದೆ ರುದ್ರಪ್ಪ ಬಾಂಬೆ,
   ವಯಸ್ಸುಃ 35 ವರ್ಷ, ಉಃ ಒಕ್ಕಲುತನ,
   ಸಾಃ ವಂದಲಿ, ತಾಃ ದೇವದುರ್ಗ.

## ದೋಷಾರೋಪಣೆ

ನಾನು ಹೆ.ಚ್.ಎ.ಸಾತ್ವಿಕ್, ದೇವದುರ್ಗದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೋರಿಸುವುದೇನೆಂದರೆ,

ದಿನಾಂಕಃ 13.05.2023 ರಂದು ಬೆಳಗ್ಗೆ 06.30 ಗಂಟೆಯ ಸಮಯದಲ್ಲಿ ಜಾಲಹಳ್ಳಿ ಪೊಲೀಸ ಠಾಣಾ ವ್ಯಾಪ್ತಿಯಲ್ಲಿರುವ ವಂದಲಿ ಗ್ರಾಮದಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಕೈಯಿಂದ ಬೆನ್ನಿಗೆ ಗುದ್ದಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 323 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

2. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಕಟ್ಟಿಗೆಯಿಂದ ತಲೆಗೆ ಮತ್ತು ಎಡಗೈ ಮೋಣಕೈಗೆ ಹೊಡೆದು ಭಾರಿ ರಕ್ತಗಾಯ ಮಾಡಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 324 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

3. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ ಆರೋಪಿಯಾದ ನೀವು ಸಾಕ್ಷಿ-1 ರವರಿಗೆ ಲೇ ಸೂಳೆ ಮಗನೆ ನೀನು ಯಾರಲೇ ಕೇಳುವುದಕ್ಕೆ ಅಂತಾ ಅವಾಚ್ಯವಾಗಿ ಬೈದಿರುವಿರೆಂದು ನಿಮ್ಮ ವಿರುದ್ದ ಭಾ.ದಂ.ಸಂ. ಕಲಂ 504 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

4. ಸದರಿ ಮೇಲೆ ಹೇಳಿದ ದಿನಾಂಕ ಹಾಗೂ ಸಮಯಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಅವಾಚ್ಯವಾಗಿ ಬೈದು ಜಗಳ ಬಿಡಿಸದೆ ಇದ್ದಲ್ಲಿ ನಿನ್ನನ್ನು ಜೀವ ಸಹಿತ

ಬಿಡುತ್ತಿರಲಿಲ್ಲ ಎಂದು ಜೀವದ ಬೇದರಿಕೆ ಹಾಕಿರುವಿರೆಂದ್ದು ಭಾ.ದಂ.ಸಂ. ಕಲಂ 506 ರ ಅಡಿಯಲ್ಲಿ ದೋಷಾರೋಪಣೆಯನ್ನು ಹೋರಿಸಲಾಗಿದೆ.

ಪ್ರಶ್ನೆಃ1 ಈ ಮೇಲೆ ಓದಿ ಹೇಳಿದ ದೋಷಾರೋಣೆಗಳು ನಿಮಗೆ ಅರ್ಥವಾಯಿತೇ ?
ಆರೋಪಿ ಉತ್ತರಃ

ಪ್ರಶ್ನೆಃ2 ಸದರಿ ದೋಷಾರೋಪಣೆಗಳನ್ನು ನೀವು ಒಪ್ಪಿಕೊಳ್ಳುವಿರಾ ?
ಆರೋಪಿ ಉತ್ತರಃ

ಪ್ರಶ್ನೆಃ3 ಸದರಿದೋಷಾರೋಪಣೆಗಳ ಬಗ್ಗೆ ನಿಮ್ಮ ವಿಚಾರಣೆ ಆಗಬೇಕೆ ?
ಆರೋಪಿ ಉತ್ತರಃ

(ಸದರಿ ಆರೋಪಣೆಗಳನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಆರೋಪಿತರು ನೀಡಿದ ಉತ್ತರ/ಉತ್ತರಗಳನ್ನು ಸರಿಯಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢಿಕರಿಸಲಾಗಿದೆ.)

ದಿನಾಂಕಃ 01.03.2024 ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸ್ಥಳಃ ದೇವದುರ್ಗ ದೇವದುರ್ಗ.